ಮಾಡಿದ ಈ ಎಲ್ಲ ಕೆಲಸಗಳು ನನಗೆ ತೃಪ್ತಿ ಕೊಟ್ಟಿವೆ. ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಕುರಿತು ಕೂಡ ಒಂದು ಪುಸ್ತಕ ಮಾಡಿದ್ದೀವಿ. ಹಾಗೇನೆ ಚಂದ್ರಶೇಖರ ಕಂಬಾರರು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ 'ಕಿರಿಯರ ಕರ್ನಾಟಕ' ಸಂಪುಟಕ್ಕೆ ಎಲ್.ಎಸ್. ಶೇಷಗಿರಿರಾಯರ ಜೊತೆ ನಾನು ಕೆಲಸ ಮಾಡಿದ್ದೀನಿ. ಈ ಬಗೆಯ ಅನೇಕ ಕೆಲಸಗಳನ್ನು ಮಾಡಿದ್ದೇನೆ.

◆ **ಇದೆಲ್ಲದರ ನಡುವೆ ನಿಮ್ಮ ಎಂ.ಎ. ಮತ್ತು ಪಿಎಚ್.ಡಿ. ವಿಷಯ ಕೇಳೋದು ಹಾಗೇ ಉಳೀತು..**

ನಾನು ಕೇಂದ್ರ ಸಾಹಿತ್ಯ ಅಕಾಡೆಮಿಗೆ ಸದಸ್ಯೆ ಆಗಿದ್ದೆ. ಆಗ ನನ್ನ ಆಪ್ತರಾದ ಹಾ.ಮಾ. ನಾಯಕ್, ಎನ್.ಎಸ್. ತಾರಾನಾಥ್ ಇವರೆಲ್ಲ ನನಗೆ ಕನ್ನಡ ಎಂ.ಎ. ಮಾಡೋಕೆ ಒತ್ತಾಯ ಮಾಡಿದ್ರು. ಆಗ, ದೂರಶಿಕ್ಷಣದ ಮೂಲಕ ಎಂ.ಎ. ಕಟ್ಟಿದೆ. ಅವರು ಮಾಡ್ತಾ ಇದ್ದ ಸಂಪರ್ಕ ತರಗತಿಗಳಿಗೂ ನಾನು ಹೋಗ್ತಾ ಇದ್ದೆ. ಮಗ ಗುರುವಿನ ಮದುವೆಯ ದಿವಸ (1983ರಲ್ಲಿ) ಫಲಿತಾಂಶದ ಟೆಲಿಗ್ರಾಮ್ ಬಂತು. ಗೊರೂರು, ಹಂಪನಾ, ಹಾ.ಮಾ. ನಾಯಕ್ ಅವರೆಲ್ಲ ಮಧ್ಯಾಹ್ನ ಊಟಕ್ಕೆ ಕುಳಿತ ಸಮಯದಲ್ಲಿ ಆ ಟೆಲಿಗ್ರಾಂ ಬಂದಿದ್ದು. ನಂತರ ಪಿಎಚ್.ಡಿ. ಮಾಡೋದಿಕ್ಕೂ ಅವರೆಲ್ಲರೂ ಒತ್ತಾಸೆ ಕೊಟ್ಟರು. 'ಶ್ರೀರಂಗರ ನಾಟಕಗಳು – ಒಂದು ಅಧ್ಯಯನ' ಎನ್ನುವ ವಿಷಯದ ಮೇಲೆ ಪಿಎಚ್.ಡಿ. ಮಾಡಿದೆ. ನಾಯಕರೇ ನನ್ನ ಗೈಡ್. ಆದರೆ, ಸ್ವಲ್ಪ ದಿನಕ್ಕೇ ಅವರು ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಉಪ ಕುಲಪತಿಗಳಾಗಿ ಹೊರಟು ಹೋದರು. ಅದೂ ಅಲ್ಲದೆ ನನ್ನ ಮತ್ತು ಅವರ ದೃಷ್ಟಿಕೋನಗಳು ಮತ್ತು ದಾರಿಗಳು ಭಿನ್ನವಾಗಿದ್ದವು. ಅವರದು ಅಂಕಿ ಅಂಶ ಆಧಾರಿತ ದಾರಿ, ನನ್ನದು ವಿಶ್ಲೇಷಣಾ ಮಾದರಿ. ಕೊನೆಗೆ ನನ್ನ ಸಹಾಯಕ್ಕೆ ಬಂದವರು ಎಚ್.ಎಸ್. ರಾಘವೇಂದ್ರರಾವ್ ಅವರು. ಅವರೊಂದಿಗೆ ದೀರ್ಘವಾದ ಚರ್ಚೆಗಳನ್ನು ನಡೆಸಿ ಪಿಎಚ್.ಡಿ. ಮಾಡಿದ್ದಾಯ್ತು.

◆ **ಸ್ವಯಂಭುವಿನಂತೆ ನಿಮ್ಮ ಬದುಕನ್ನು ಕಟ್ಟಿಕೊಂಡವರು ನೀವು. ಹಲವು ಕ್ಷೇತ್ರಗಳಲ್ಲಿ ದಣಿವರಿಯದ ಕೆಲಸ ಮಾಡಿದ್ದೀರಿ. ಯಾವುದು ನಿಮ್ಮ ಆತ್ಮಕ್ಕೆ ಹತ್ತಿರ?**

